



ರಸ್ತೆ ಬದಿಗೆ ಹೋಗಿ ನಿಂತುಬಿಡುತ್ತದೆ.

ಬಹುತೇಕ ಪ್ರೀಮಿಯಂ ಕಾರು ತಯಾರಕರು ಈ ಸವಲತ್ತುಗಳಿರುವ ಕಾರನ್ನು ಹೊಂದಿದ್ದಾರೆ. ಈ ಸವಲತ್ತುಗಳಿರುವ ಕಾರಿನ ಬೆಲೆ ಆರಂಭವಾಗುವುದೇ ₹ 1.8 ಕೋಟಿಯ ಆಸುಪಾಸಿನಲ್ಲಿ.

### 3. ಕಂಡೀಷನಲ್ ಆಟೊಮೇಷನ್

ಕೆಲವು ನಿಗದಿತ ವಾತಾವರಣದಲ್ಲಿ ಕಾರುಗಳು ಸ್ವತಃ ತಾವೇ ಚಲಾಯಿಸುಕೊಂಡು ಹೋಗುವ ಹಂತವಿದು. ಉದಾಹರಣೆಗೆ ನೇರವಾಗಿರುವ, ಲೇನ್ ಮಾರ್ಕಿಂಗ್ ಇರುವ ಹೆದ್ದಾರಿ ಇದೆ ಎಂದಿಟ್ಟುಕೊಳ್ಳಿ. ಅಲ್ಲಿ ಕಾರನ್ನು ನೀವು ಆಟೊಮೇಷನ್ ಮೋಡ್‌ಗೆ ತಳ್ಳಬಹುದು. ಆಗ ಕಾರು ತಾನೇ ಚಲನೆಯ ದಿಕ್ಕು, ವೇಗ ಮತ್ತು ಬ್ರೇಕಿಂಗ್ ಅನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತದೆ. ಅಗತ್ಯವಿದ್ದಾಗ ಓವರ್‌ಟೇಕಿಂಗ್ ಅನ್ನೂ ಮಾಡುತ್ತದೆ. ಚಾಲಕನಿಗೆ ವಿಶ್ವಾಸವಿದ್ದಲ್ಲಿ ಚಾಲನೆಯ ಹೊಣೆಯನ್ನು ಕಾರಿಗೆ ಬಿಟ್ಟು, ಓದುವುದೋ, ತಿನ್ನವುದನ್ನೋ ಮಾಡಬಹುದು. ಆದರೆ ತನ್ನಿಂದ ಸ್ವಯಂಚಾಲಿತ ಚಾಲನೆ ಸಾಧ್ಯವಿಲ್ಲ ಎಂದು ಮನದಟ್ಟಾದೊಡನೆ ನಿಯಂತ್ರಣಕ್ಕೆ ತೆಗೆದುಕೊಳ್ಳುವಂತೆ ಚಾಲಕನಿಗೆ ಸೂಚನೆ ನೀಡುತ್ತದೆ. ಈ ಹಂತದಲ್ಲೂ ಚಾಲನೆಯ ಸಂಪೂರ್ಣ ಜವಾಬ್ದಾರಿ ಚಾಲಕನದ್ದೇ ಆಗಿರುತ್ತದೆ. ಕೆಲವಾರು ಕಂಪನಿಗಳು ಈ ಹಂತದ ಅಟೊನೊಮಸ್ ಡ್ರೈವಿಂಗ್ ಅನ್ನು ಸಾಧಿಸಿವೆಯಾದರೂ, ಟೆಸ್ಲಾ ಮಾತ್ರ ಅಂತಹ ಕಾರನ್ನು ಮಾರುಕಟ್ಟೆಗೆ ಬಿಟ್ಟಿದೆ.

### 4. ಹೈ ಆಟೊಮೇಷನ್

ಈ ಹಂತದಲ್ಲಿ ಕಾರು ಸಂಪೂರ್ಣವಾಗಿ ತನ್ನನ್ನು ತಾನು ನಿಯಂತ್ರಿಸಿಕೊಳ್ಳುತ್ತದೆ. ಅದು ನಗರದ ಇಕ್ಕಟ್ಟಿನ ರಸ್ತೆಗಳಿರಬಹುದು, ಪಾರ್ಕಿಂಗ್ ಮಾಲ್ ಇರಬಹುದು, ಹೆದ್ದಾರಿ ಇರಬಹುದು. ಕಾರು ಸ್ಟಿರಿಂಗ್–ವೇಗ–ಬ್ರೇಕಿಂಗ್ ಎಲ್ಲವನ್ನೂ ಪೂರ್ಣ ಪ್ರಮಾಣದಲ್ಲಿ ತಾನೇ ನಿರ್ವಹಿಸುತ್ತದೆ. ನೀವು ಹೋಗಬೇಕಿರುವ ಸ್ಥಳದ ಲೊಕೇಷನ್ ಅನ್ನು ನಮೂದಿಸಿದರೆ ಸಾಕು. ಕಾರು ನಿಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಬಿಡುತ್ತದೆ. ಸಂಚಾರ ನಿಯಮಗಳು ಮತ್ತು ಸಂಚಾರ ಸೂಚನಾ ದೀಪಗಳನ್ನೂ ಪರಿಶೀಲಿಸುವ ಸಾಮರ್ಥ್ಯ ಈ ಹಂತದ ಕಾರುಗಳಿಗಿರುತ್ತದೆ. ಆದರೂ, ಚಾಲನೆಯ ಸಂಪೂರ್ಣ ಜವಾಬ್ದಾರಿ ಚಾಲಕನದ್ದೇ ಆಗಿರುತ್ತದೆ. ತೀವ್ರ ಮಳೆ ಮತ್ತು ಮಂಜು ಮುಸುಕಿದ್ದಾಗ ಸ್ವಯಂಚಾಲನೆಗೆ ಈ ಕಾರುಗಳು ನಿರಾಕರಿಸುತ್ತವೆ. ಆಗ ಚಾಲಕ ಕಾರಿನ ನಿಯಂತ್ರಣ ತೆಗೆದುಕೊಳ್ಳಬೇಕಾಗುತ್ತದೆ. ಟೆಸ್ಲಾ ಕಂಪನಿಯ ಮಾಡೆಲ್ ಎಸ್ ಹೈ ಆಟೊಮೇಷನ್ ಸಾಧಿಸಿರುವ ಒಂದು ಕಾರು. ಈ ಸವಲತ್ತಿಗೆ ಟೆಸ್ಲಾ ‘ಆಟೊಪೈಲಟ್’ ಎಂದು ಹೆಸರಿಟ್ಟಿದೆ. ಅಮೆರಿಕ ಮತ್ತು ಯೂರೋಪ್‌ನ ಹಲವೆಡೆ ಈ ಕಾರುಗಳು ಬಳಕೆಯಲ್ಲಿವೆ.

### 5. ಫುಲ್ ಆಟೊಮೇಷನ್

ಮೊದಲೇ ಹೇಳಿದಂತೆ ಈ ಹಂತದ ಕಾರುಗಳಲ್ಲಿ ಸ್ಟಿರಿಂಗ್– ಪೆಡಲ್– ಲಿವರ್ ಯಾವುವೂ ಇರುವುದಿಲ್ಲ. ಇವಕ್ಕೆ ಚಾಲಕನೇ ಬೇಕಿಲ್ಲ. ಕಾರಿನಲ್ಲಿ ಕೂತು, ಹೋಗಬೇಕಿರುವ ಸ್ಥಳದ ಲೊಕೇಷನ್ ನಮೂದಿಸಿದರೆ ಸಾಕು. ಮುಂದಿನ ಎಲ್ಲ ಕೆಲಸಗಳನ್ನೂ ಕಾರೇ ಮಾಡಿಕೊಳ್ಳುತ್ತದೆ.

ಈ ಹಂತದ ಆಟೊಮೇಷನ್ ಅನ್ನು ಈಗ ಕಠಿಣ ಪರೀಕ್ಷೆಗಳಿಗೆ ಒಳಪಡಿಸಲಾಗುತ್ತಿದೆ. ಅದರಲ್ಲಿ ಗೂಗಲ್ ಕಾರುಗಳು ಅತಿ ಮುಖ್ಯವಾದುದು. ಈ ಕಾರುಗಳನ್ನು ಗೂಗಲ್ ಅಭಿವೃದ್ಧಿಪಡಿಸಿದೆ ಎಂದಲ್ಲ. ಈಗಾಗಲೇ ಮಾರುಕಟ್ಟೆಯಲ್ಲಿ ಲಭ್ಯವಿರುವ ಕಾರುಗಳಿಗೆ ಅಟೊನೊಮಸ್ ಡ್ರೈವಿಂಗ್ ಸಿಸ್ಟಂ ಅನ್ನು ಅಳವಡಿಸಲಾಗಿದೆ. ಕ್ಯಾಲಿಫೋರ್ನಿಯಾದ ಸಿಲಿಕಾನ್ ವ್ಯಾಲಿಯ ರಸ್ತೆಗಳಲ್ಲಿ ಈ ಕಾರುಗಳು ಓಡಾಡುತ್ತ ಪರೀಕ್ಷೆಗಳನ್ನು ಎದುರಿಸುತ್ತಿವೆ. ಈ ಸವಲತ್ತು ಇರುವ ಕಾರುಗಳು ಯಾವಾಗ ನಮ್ಮ ರಸ್ತೆಗೆ ಇಳಿಯುತ್ತವೆಯೋ ಎಂಬುದನ್ನು ಕಾದು ನೋಡಬೇಕು.

ಹಾಗೆಂದು ನಿರಾಶೆ ಪಡಬೇಕಿಲ್ಲ. ತಂತ್ರಜ್ಞಾನದ ಅಭಿವೃದ್ಧಿಯಾಗಿದೆ, ಅದರ ಪ್ರಾಯೋಗಿಕ ಪರೀಕ್ಷೆ ನಡೆಯುತ್ತಿದೆ. ನಿಯಮದ ಮತ್ತು ತಾಂತ್ರಿಕ ತೊಡಕುಗಳಿಗೆ ಪರಿಹಾರ ಕಂಡು ಹಿಡಿಯಬೇಕಿದೆ. ಆಶಾವಾದಿಗಳಾಗೋಣ. ಕೆಲವೇ ವರ್ಷಗಳಲ್ಲಿ– ನೀವು ಕಚೇರಿಯಲ್ಲಿ ಕುಳಿತಂತೆ ಕಾರಿನಲ್ಲಿ ಕುಳಿತುಕೊಂಡಿದ್ದರೆ ಸಾಕು; ಕಾರು ತಾನಾಗಿಯೇ ನಿಮ್ಮನ್ನು ಮನೆಗೆ ಅಥವಾ ಕಚೇರಿಗೆ ತಲುಪಿಸುವ ಸಂದರ್ಭ ಬರಬಹುದು. ಅಲ್ಲಿಯವರೆಗೆ ಕಾಯೋಣ. ■